

ಸಂಪಾದಕೀಯ

# ಆಧ್ಯಾತ್ಮಿಕ ಗುಣಗಳು ಮತ್ತು ಅವುಗಳ ಅಭ್ಯಾಸ

ಆಧ್ಯಾತ್ಮಿಕ ಜೀವನವೆಂದರೆ ಅದು ಉಳಿದ ಎಲ್ಲರಿಗಿಂತ ಭಿನ್ನವಾದ, ವಿಶಿಷ್ಟವಾದ ಗುಣ-ಸ್ವಭಾವಗಳನ್ನು ಹೊಂದಿ ಬದುಕುವ ರೀತಿ. ಇಲ್ಲಿ ಜೀವನದ ಗುರಿ ಬೇರೆ, ಬದುಕುವ ವಿಧಾನ ಬೇರೆ, ಇಂಥ ಜೀವನವನ್ನು ನಡೆಸುವ ವ್ಯಕ್ತಿಯ ವ್ಯಕ್ತಿತ್ವವೂ ಬೇರೆ. ಅವರು ಯಾವ ರೀತಿಯಲ್ಲಿ ಭಿನ್ನರು? ಉಳಿದವರಿಗಿಂತ ಆಧ್ಯಾತ್ಮಿಕ ಸಾಧಕರು ಭಿನ್ನರಾಗುವುದಾದರೂ ಏಕೆ?

ಉತ್ತರ ಸ್ಪಷ್ಟವಾಗಿದೆ. ಆಧ್ಯಾತ್ಮಿಕ ವ್ಯಕ್ತಿ ನಂಬಿರುವ ಸತ್ಯವೇ ಬೇರೆ. ಭಗವಂತನ ಅಸ್ತಿತ್ವದಲ್ಲಿ ಅವರಿಗೆ ಸಂದೇಹವೇ ಇಲ್ಲ. ಎಲ್ಲವನ್ನೂ ಭಗವಂತನೇ ತುಂಬಿಕೊಂಡಿದ್ದಾನೆ, ಅವನನ್ನು ಆಶ್ರಯಿಸಿಯೇ ಜಗತ್ತು ನಡೆಯುತ್ತದೆ; ಅಂತಿಮವಾಗಿ ಎಲ್ಲವೂ ಹೋಗಿ ಸೇರಬೇಕಾದ ಗುರಿಯೂ ಭಗವಂತನೇ — ಹೀಗೆಂದು ಅವರು ಸಂಪೂರ್ಣ ನಂಬುತ್ತಾರೆ. ಆದ್ದರಿಂದ, ಅಂಥ ಭಗವಂತನ ಕೃಪೆಗೆ ಪಾತ್ರರಾಗುವುದು, ಅವನನ್ನು ಕಾಣುವುದು, ಅವನಲ್ಲಿ ಒಂದಾಗುವುದು ಪ್ರತಿಯೊಬ್ಬ ಆಧ್ಯಾತ್ಮಿಕ ಸಾಧಕನ ಗುರಿಯಾಗಿದೆ. ಆ ಭಗವಂತನ ಚೈತನ್ಯದ ಒಂದು ಅಂಶವೇ ತನ್ನೊಳಗೆ ಇರುವುದರಿಂದ, ಇಚ್ಛಾಪೂರ್ವಕವಾಗಿ ಮಾನವನಿಗೆ ಭಗವಂತನನ್ನು ಕುರಿತು ತಿಳಿಯುವ ಹಾಗೂ ಸಾಕ್ಷಾತ್ಕಾರ ಮಾಡಿಕೊಳ್ಳುವ ಸಾಮರ್ಥ್ಯ ಇರುವುದರಿಂದ, ಭಗವದ್ ಕೇಂದ್ರಿತ ಜೀವನವನ್ನು ನಡೆಸುವುದು ಅರ್ಥಪೂರ್ಣವಾದ ಬದುಕಾಗಿ ಮಾರ್ಪಡುವುದು ಎಂದು ಅವನು ನಂಬುತ್ತಾನೆ.

ಹೀಗೆ ತನ್ನ ಜೀವನವನ್ನು ಮಾರ್ಪಡಿಸಿಕೊಳ್ಳುವುದು ಆಧ್ಯಾತ್ಮಿಕ ವ್ಯಕ್ತಿಗೆ ಅತ್ಯಂತ ಸಹಜವಾದ ಒಂದು ಕ್ರಿಯೆಯಾಗಿದೆ. ಕೆಲವೊಂದು ಬದಲಾವಣೆಗಳನ್ನು ಅರಿತೂ, ಇನ್ನು ಕೆಲವನ್ನು ಅರಿಯದೆಯೂ ಅವನು ಮಾಡಿಕೊಳ್ಳುವನು. ಆಧ್ಯಾತ್ಮಿಕ ಜೀವನಕ್ಕೆ ಹಾಗೂ ಭಗವಂತನನ್ನು ಸಮೀಪಿಸುವುದಕ್ಕೆ ಅನುಕೂಲಕರವಾದ ಗುಣಗಳನ್ನು ಅಳವಡಿಸಿಕೊಳ್ಳುವುದು; ಹಾಗೂ ವಿರುದ್ಧ ಗುಣಗಳನ್ನು ತ್ಯಜಿಸುವುದು — ಇವೆರಡನ್ನೂ ಸಾಧಕನು ಮಾಡಬೇಕಾಗುತ್ತದೆ. ಸಾಮಾನ್ಯವಾಗಿ ಈ ಗುಣ, ಸ್ವಭಾವಗಳು ಜನ್ಮತಃ ಬಂದಿರುವುದಿಲ್ಲ; ಕೆಲವೊಂದು ಸಮಾಜದಲ್ಲಿ ಅಥವಾ ಕುಟುಂಬಗಳಲ್ಲಿ ಚಿಕ್ಕ ವಯಸ್ಸಿನಿಂದಲೇ ಈ ಸ್ವಭಾವಗಳನ್ನು ರೂಢಿಸಿಕೊಳ್ಳಲು ಕಲಿಸಲಾಗುತ್ತದೆ. ಈ ರೀತಿ ಆಧ್ಯಾತ್ಮಿಕ ತರಬೇತಿ ನೀಡುವುದನ್ನು ಭಾರತೀಯ ಸಂಸ್ಕೃತಿ ಹಾಗೂ ಸಮಾಜ ಸಹಸ್ರಾರು ವರ್ಷಗಳಿಂದ ರೂಢಿಸಿಕೊಂಡು ಬಂದಿದೆ. ಆದರೆ ಎಲ್ಲರಿಗೂ, ಎಲ್ಲ ಅಗತ್ಯವಾದ ಆಧ್ಯಾತ್ಮಿಕ ಗುಣಗಳೂ ಈ ರೀತಿಯ ತರಬೇತಿಯಿಂದ ಬಂದಿರಲಾರದು; ಆದ್ದರಿಂದ ಪ್ರತಿಯೊಬ್ಬರೂ ಒಂದಲ್ಲ ಒಂದು ಆಧ್ಯಾತ್ಮಿಕ ಗುಣಗಳನ್ನು ಹೊಸದಾಗಿ ರೂಢಿಸಿಕೊಳ್ಳಲೇಬೇಕಾಗುವುದು. ಧರ್ಮ, ಸಂಸ್ಕೃತಿ, ಮತಗಳು ಈ ರೀತಿಯ ತರಬೇತಿ ಮಾಡುವ ಹಲವು ವಿಧಾನಗಳನ್ನು ಪರಂಪರಾಗತವಾಗಿ ಅಳವಡಿಸಿಕೊಂಡಿವೆ.

ಹೀಗಿದ್ದರೂ ಸಾರ್ವತ್ರಿಕವಾಗಿ ಎಲ್ಲ ಧರ್ಮಗಳಲ್ಲೂ ಸಂಸ್ಕೃತಿಗಳಲ್ಲೂ ಕೆಲವು ಸಮಾನವಾದ ಆಧ್ಯಾತ್ಮಿಕ ಗುಣಗಳಿಗೆ ಮಹತ್ವ ನೀಡಲಾಗಿದೆ. ಒಂದೊಂದು ಸಾಧನೆಯ ಕ್ರಮದಲ್ಲಿ ಒಂದೊಂದು ಗುಣ ಮುಖ್ಯವೆನಿಸಬಹುದು; ಆದರೆ ಅದರೊಂದಿಗೆ ಇತರ ಗುಣಗಳೂ ಅಗತ್ಯವೆಂದು ಅವು ಹೇಳುತ್ತವೆ. ಹಿಂದೂಧರ್ಮದ ವಿವಿಧ ಸಂಪ್ರದಾಯಗಳಲ್ಲಿ, ವಿಶೇಷವಾಗಿ ವೇದಾಂತದ ಪರಂಪರೆಗಳಲ್ಲಿ ಹೇಳಿರುವ ಕೆಲವು ಮುಖ್ಯ ಆಧ್ಯಾತ್ಮಿಕ ಗುಣಗಳನ್ನು ಪ್ರಸ್ತುತ ಪರಿಶೀಲಿಸೋಣ.

ಆಧ್ಯಾತ್ಮಿಕ ಗುಣಗಳ ಬಗ್ಗೆ ಇನ್ನಷ್ಟು ಗಮನಿಸುವುದಕ್ಕೆ ಮೊದಲು, ಭಾರತದ ವಿವಿಧ ದರ್ಶನ, ಪರಂಪರೆ ಹಾಗೂ ಶಾಸ್ತ್ರಗ್ರಂಥಗಳಲ್ಲಿ ಹೇಳಲಾಗಿರುವ ಪ್ರಮುಖ ಅಂಶಗಳನ್ನು ಸಂಕ್ಷಿಪ್ತವಾಗಿ ಗಮನಿಸುವುದು ಅಪ್ರಸ್ತುತವಾಗದು. ವೇದ, ಉಪನಿಷತ್ತುಗಳಲ್ಲಿ ಆಧ್ಯಾತ್ಮಿಕ ಅನುಭೂತಿ ಹಾಗೂ ತತ್ತ್ವಗಳನ್ನು ಕುರಿತು ಪ್ರಧಾನವಾಗಿ ಹೇಳುವ ಭಾಗಗಳಲ್ಲಿ ನಡುನಡುವೆ, ಇದನ್ನು ಪಡೆಯುವ ಸಾಧಕನು ಹೇಗಿರಬೇಕು, ಅವನಲ್ಲಿರಬೇಕಾದ ಗುಣಗಳೇನು ಮುಂತಾದ ವಿಷಯಗಳನ್ನು ಹೇಳುತ್ತವೆ. 'ಅರಣ್ಯದಲ್ಲಿ ತಪಸ್ಸು, ಶ್ರದ್ಧೆಗಳನ್ನು ಆಚರಿಸುತ್ತ ಶಾಂತರೂ ವಿದ್ವಾಂಸರೂ ಆದ, ಪಾಪಪುಣ್ಯಗಳನ್ನು ಕಳೆದುಕೊಂಡ ಅವರು ಅವ್ಯಯನಾದ ಪುರುಷನೆಡೆಗೆ ಹೋಗುತ್ತಾರೆ. ಪ್ರಪಂಚದಲ್ಲಿ ಎಲ್ಲವನ್ನೂ ಪರೀಕ್ಷಿಸಿ, ಯಾವುದು ನಿತ್ಯ- ಯಾವುದು ಅನಿತ್ಯವೆಂದು ತಿಳಿದುಕೊಂಡು, ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆದ ಗುರುವಿನ ಬಳಿಗೆ ಹೋಗಿ ಸಾಧನೆ ಮಾಡಬೇಕು' ಎಂದು ಮುಂಡಕೋಪನಿಷತ್ತು *(೧.೨.೧೧-೧೨)* ಹೇಳುತ್ತದೆ. ಇಲ್ಲಿ ಸಾಧಕನು ಸಾಗಬೇಕಾದ ಮಾರ್ಗ ಸ್ಪಷ್ಟವಾಗಿದೆ: ಅವನದು ಏಕಾಕಿಯಾದ ಮಾರ್ಗ; ಅಷ್ಟೇ ಅಲ್ಲ, ಎಲ್ಲ ಪ್ರಾಪಂಚಿಕ ಸುಖಭೋಗಗಳನ್ನು ತ್ಯಜಿಸಿ, ಅವ್ಯಯನಾದ ಪರಮಾತ್ಮನೇ ಪರಮಸತ್ಯವೆಂದು ಅವನೆಡೆಗೆ ಸಾಗುವ ಮಾರ್ಗ. ಇಲ್ಲಿ ತ್ಯಾಗ, ವೈರಾಗ್ಯಗಳು ಅಗತ್ಯವಾಗಿ ಇರಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಗುರುವಿನ ನೇರ ತರಬೇತಿಯಿಂದ ಈ ಬಗೆಯ ಜೀವನವನ್ನು ನಡೆಸಬೇಕು ಎನ್ನಲಾಗಿದೆ.

ಕಠೋಪನಿಷತ್ತು ಸಾಧಕನು ಹೊಂದಿರಬೇಕಾದ ಹಲವು ಗುಣಗಳನ್ನು ಕುರಿತು ಹೇಳುತ್ತದೆ: '**ತಮಕ್ರತುಃ ಪಶ್ಯತಿ ವೀತ**

**ಶೋಕೋ ಧಾತುಪ್ರಸಾದಾನ್ಮಹಿಮಾನಮಾತ್ಮನಃ**' (ಕಾಮುಗಳಿಲ್ಲದ, ಇಂದ್ರಿಯಗಳ ನಿಗ್ರಹದಿಂದ ಶಾಂತನಾದ ಸಾಧಕನು ಆ ಪರಮಾತ್ಮನನ್ನು ಕಾಣುವನು); **ನಾವಿರತೋದುಶ್ಚರಿತಾನ್ನಾಶಾಂತೋ ನಾಸಮಾಹಿತಃ । ನಾಶಾಂತಮಾನಸೋವಾಪಿ ಪ್ರಜ್ಞಾನೇನೈನಮಾಪ್ನುಯಾತ್**' (ದುರಾಚಾರಗಳನ್ನು ಬಿಡದ, ಶಾಂತನಲ್ಲದ, ಸಮಾಧಾನವಿಲ್ಲದ, ಮನಶ್ಶಾಂತಿಯಿಲ್ಲದ ವ್ಯಕ್ತಿ ಇವನನ್ನು ಪಡೆಯಲಾರರು); '**ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ**' (ಸೂಕ್ಷ್ಮವಾದ ಬುದ್ಧಿಯುಳ್ಳವನಿಗೆ ಅವನು ಕಾಣಿಸುತ್ತಾನೆ), ಇಂದ್ರಿಯನಿಗ್ರಹ, ಮನಸ್ಸು-ಬುದ್ಧಿ-ದೇಹಗಳ ಸಮಾಧಾನ ಇವು ಸಾಧಕನಿಗೆ ಅತ್ಯಂತ ಮುಖ್ಯವೆಂದು ಇಲ್ಲಿ ಹೇಳಲಾಗಿದೆ. ತೈತ್ತಿರೀಯ ಉಪನಿಷತ್ತಿನಲ್ಲಿ ಆಚಾರ್ಯನಾದವನು ಶಿಷ್ಯನಿಗೆ ಉಪದೇಶ ಮಾಡುತ್ತ ಹೇಳುತ್ತಾನೆ: ''ಸತ್ಯವನ್ನು ನುಡಿ. ಧರ್ಮವನ್ನು ಆಚರಿಸು. ತಾಯಿ, ತಂದೆ, ಗುರು ಇವರನ್ನು ದೇವರಂತೆ ಪೂಜಿಸುತ್ತ ಸೇವೆ ಮಾಡು.'' ಮುಂದೆ, '**ತಪಸಾ ಬ್ರಹ್ಮ ವಿಜಿಜ್ಞಾಸಸ್ವ**' (ತಪಸ್ಸಿನಿಂದ ಬ್ರಹ್ಮವನ್ನು ತಿಳಿದುಕೋ) ಎಂದು ಸಾಧನೆಯ ಪ್ರಾಮುಖ್ಯತೆಯನ್ನು ಹೇಳುತ್ತದೆ. ಸಾಕ್ಷಾತ್ಕಾರವನ್ನು ಹೊಂದಲು ಬ್ರಹ್ಮಚರ್ಯ, ಸಂನ್ಯಾಸ ದೀಕ್ಷೆಗಳನ್ನು ಸ್ವೀಕರಿಸಬೇಕೆಂದು ಉಪನಿಷತ್ತುಗಳು ಹೇಳುತ್ತವೆ *(ಛಾಂದೋಗ್ಯ, ೮.೫. ೧-೪ ಹಾಗೂ ಕಠ, ೧.೨.೧೫; ಮುಂಡಕ ೧.೨.೧೧. ಬೃಹದಾರಣ್ಯಕ ೨.೪)* ; ಇವು ವೇದಕಾಲದಲ್ಲಿ ಹೇಗೆ ಸಾಧನೆಗೆ ಮಹತ್ವವನ್ನು ನೀಡಲಾಗಿತ್ತು ಎಂಬುದನ್ನು ಸೂಚಿಸಿವೆ.

ವೇದೋಪನಿಷತ್ತುಗಳ ನಂತರ ಸಾಧನೆಗೆ ಹಾಗೂ ಸಾಧಕನ ತರಬೇತಿಗೆ ಅತಿ ಹೆಚ್ಚಿನ ಮಹತ್ವವನ್ನು ನೀಡಿರುವ ಗ್ರಂಥಗಳೇ ಭಗವದ್ಗೀತೆ ಮತ್ತು ಪಾತಂಜಲ ಯೋಗಸೂತ್ರಗಳು. ಈ ಎರಡು ಗ್ರಂಥಗಳಲ್ಲೂ ಸಾಧಕನಲ್ಲಿರಬೇಕಾದ ಗುಣಗಳನ್ನು ಕುರಿತಂತೆ ಕೆಲವು ಪ್ರಮುಖವಾದ ಅಂಶಗಳನ್ನು ಹೇಳಲಾಗಿದೆ. ಭಗವದ್ಗೀತೆಯಲ್ಲಿ ಸ್ಥಿತಪ್ರಜ್ಞನ ಲಕ್ಷಣ, ಯೋಗಿಯ ಲಕ್ಷಣ — ಹೀಗೆ ವಿಭಿನ್ನ ಆಧ್ಯಾತ್ಮಿಕ ಪಥಗಳನ್ನು ಅನುಸರಿಸುವ ಸಾಧಕನಲ್ಲಿರಬೇಕಾದ ಪ್ರಧಾನ ಗುಣಗಳನ್ನು ಪಟ್ಟಿ ಮಾಡಿ ಹೇಳಲಾಗಿದೆ. ಇದರೊಂದಿಗೆ ದೈವಾಸುರ ಸಂಪದ್ವಿನಿಯೋಗ, ಗುಣತ್ರಯ ವಿಭಾಗಯೋಗ - ಈ ಅಧ್ಯಾಯಗಳಲ್ಲೂ ಸಾಧಕನ ಗುಣ-ಸ್ವಭಾವಗಳನ್ನು ಕುರಿತು ಚರ್ಚಿಸಲಾಗಿದೆ. ಬಹುಶಃ ಗ್ರಂಥದ ಆರಂಭದಿಂದ ಹಿಡಿದು ಕೊನೆಯವರೆಗೂ ಸಾಧನೆ ಹಾಗೂ ಸಾಧಕನ ವಿಚಾರವಾಗಿ ಚರ್ಚಿಸುವ, ಆಧ್ಯಾತ್ಮಿಕ ಗುಣಗಳನ್ನು ವಿಶದವಾಗಿ ತಿಳಿಸುವ ಗ್ರಂಥಗಳಲ್ಲಿ ಭಗವದ್ಗೀತೆ ಅಪ್ರತಿಮವಾಗಿದೆ ಎನ್ನಬೇಕು. ಸ್ವಯಂ ಭಗವಂತನೇ ಹೇಳಿದ, ವ್ಯಾಸ ಮಹರ್ಷಿಗಳೇ ರಚಿಸಿದ ಈ ಕೃತಿಗೆ ಇಷ್ಟೊಂದು ಮನ್ನಣೆ ಸಿಗಲು ಈ ವಿಶೇಷತೆಯೇ ಒಂದು ಪ್ರಮುಖ ಕಾರಣ. ಇನ್ನು, ಪಾತಾಂಜಲ ಯೋಗಸೂತ್ರಗಳಲ್ಲಿ ಅಷ್ಟಾಂಗಯೋಗಗಳಲ್ಲಿ ಬರುವ ಯಮ, ನಿಯಮಗಳು ಸಾಧಕನು ರೂಢಿಸಿಕೊಳ್ಳಬೇಕಾದ ಗುಣ, ಸ್ವಭಾವಗಳು. ಇವುಗಳಲ್ಲಿ ಪರಿಣತನಾದವನು ಮುಂದಿನ ಉನ್ನತ ಸಾಧನೆಗಳನ್ನು ಮಾಡಲು ಅರ್ಹನಾಗುತ್ತಾನೆ. ಇದೇ ರೀತಿ, ಸಾಧನೆಯ ಮಾರ್ಗದಲ್ಲಿ ಆಂತರಿಕ-ಬಾಹ್ಯ ತೊಂದರೆಗಳನ್ನು ಎದುರಿಸಲು ಸಾಧಕನು ಮೊದಲೇ ಸಿದ್ಧನಾಗಿರಬೇಕು. ಕ್ರಮಬದ್ಧವಾಗಿ ಸಾಧನೆಯ ಅಂಗಗಳನ್ನು ಅನುಸರಿಸುತ್ತ ಸಾಧಕನು ಯೋಗಮಾರ್ಗದಲ್ಲಿ ಮುನ್ನಡೆಯಲು ಈ ಬಗೆಯಲ್ಲಿ ರೂಢಿಸಿಕೊಂಡ ಗುಣ, ಸ್ವಭಾವಗಳು ನೆರವಾಗುತ್ತವೆ.

ವಿವಿಧ ಧಾರ್ಮಿಕ ಪರಂಪರೆಗಳಲ್ಲಿ, ವಿಶೇಷವಾಗಿ ಅದ್ವೈತ, ವಿಶಿಷ್ಟಾದ್ವೈತ, ದ್ವೈತ ಮತಗಳಿಗೆ ಸೇರಿದ ವಿವಿಧ ಪರಂಪರೆಗಳಲ್ಲಿ ಹಲವು ಸಾಧನೆಯ ಗ್ರಂಥಗಳು ರಚಿತವಾಗಿವೆ. ಶಂಕರ, ರಾಮಾನುಜ, ಮಧ್ವರು ರಚಿಸಿದ ಗ್ರಂಥಗಳು, ಇನ್ನಿತರ ಆಚಾರ್ಯರ ಕೃತಿಗಳು ಈ ದೃಷ್ಟಿಯಲ್ಲಿ ಸಾಧಕ ಪರಂಪರೆಗೆ ಮಾರ್ಗದರ್ಶನ ಮಾಡುತ್ತವೆ. ಸಮಾಜವು ಆಯಾ ಸಂಪ್ರದಾಯಕ್ಕನುಗುಣವಾಗಿ ನಡೆಯುವುದರಿಂದ, ಈ ಆಧಾರ ಗ್ರಂಥಗಳಿಗೆ ಅನುಗುಣವಾಗಿ ತಮ್ಮ ತಮ್ಮ ಗುಣ, ಸ್ವಭಾವಗಳನ್ನು ರೂಪಿಸುವುದು ಸಹಜ. ಅದೇ ರೀತಿ, ಭಾರತದ ನೂರಾರು ಸಂತರುಗಳು ತಮ್ಮ ಉಪದೇಶಗಳ ಮೂಲಕ ಹಲವು ಅಮೂಲ್ಯ ಆಧ್ಯಾತ್ಮಿಕ ಗುಣಗಳ ಬಗ್ಗೆ ಹೇಳಿದ್ದಾರೆ; ಅವುಗಳ ಸಂಗ್ರಹ ಕೃತಿಗಳು ನೂರಾರು ಲಭ್ಯವಿವೆ. ಇವುಗಳಲ್ಲಿ ಆಯಾ ಸಂತರ ನೇರ ಅನುಭವಗಳ ಹಿನ್ನೆಲೆ ಕಂಡುಬರುವುದರಿಂದ, ಅವಕ್ಕೆ ಅತಿ ಹೆಚ್ಚಿನ ಅಧಿಕೃತತೆ ಇದೆ. ಬಹುತೇಕ ಸಂತರ ಉಪದೇಶಗಳಿಗೂ ಶಾಸ್ತ್ರ ಗ್ರಂಥಗಳಿಗೂ ತಾಳೆಯಾಗುತ್ತವೆ; ವೈವಿಧ್ಯಗಳಿದ್ದರೆ ಅವು ಸಂಪ್ರದಾಯಗಳಲ್ಲಿರುವ ಭಿನ್ನತೆಯಲ್ಲಿ ಮಾತ್ರ.

ಈ ಎಲ್ಲ ಮೂಲಗಳಿಂದ ಲಭ್ಯವಾಗುವ ಕೆಲವು ಪ್ರಮುಖವಾದ ಆಧ್ಯಾತ್ಮಿಕ ಗುಣಗಳನ್ನು ಹೀಗೆ ನೋಡಬಹುದು:

**೧) ಸತ್ಯಸಂಧತೆ :** ಇದು ಅತ್ಯಂತ ಸಾರ್ವತ್ರಿಕವಾದ, ಎಲ್ಲ ಶಾಸ್ತ್ರಗ್ರಂಥಗಳಲ್ಲೂ, ಎಲ್ಲ ಧಾರ್ಮಿಕ-ಆಧ್ಯಾತ್ಮಿಕ ಗ್ರಂಥಗಳಲ್ಲೂ ಹೇಳಿರುವ ಗುಣ. ಅಷ್ಟೇಕೆ, ಬೌದ್ಧ, ಜೈನ, ಕ್ರೈಸ್ತ ಮೊದಲಾದ ಧರ್ಮಗಳಲ್ಲೂ ಸತ್ಯಸಂಧತೆಗೆ ಮೊದಲನೆಯ ಸ್ಥಾನವಿದೆ. ''**ಕಲಿಯುಗದಲ್ಲಿ ಸತ್ಯವಚನವೇ ತಪಸ್ಸು**'' ಎಂದು ಶ್ರೀರಾಮಕೃಷ್ಣರು ಹೇಳಿದ್ದಾರೆ. ಆಧ್ಯಾತ್ಮಿಕ ಸಾಧನೆಯಲ್ಲಿ ಸತ್ಯಕ್ಕೆ ಇಷ್ಟೊಂದು ಪ್ರಾಧಾನ್ಯವೇಕೆಂದರೆ, ಸತ್ಯವೆಂಬುದು ಸಾಕ್ಷಾತ್ ಪರಮಾತ್ಮನೇ ಆಗಿದೆ. ಭಗವಂತ ಹಾಗೂ ಸತ್ಯ — ಇವು ಬೇರೆಯಲ್ಲ. ಸತ್ಯದಲ್ಲಿ ಪ್ರತಿಷ್ಠಿತನಾದವನು ಉಳಿದ ಎಲ್ಲ ಆಧ್ಯಾತ್ಮಿಕ ಗುಣಗಳನ್ನೂ ಪಡೆಯುತ್ತಾನೆ, ವೇಗವಾಗಿ ಗುರಿಯತ್ತ ಸಾಗುತ್ತಾನೆ. ಆಧ್ಯಾತ್ಮಿಕ ಪುರುಷರೆಲ್ಲರೂ ಸತ್ಯವನ್ನು ಪರಿಪೂರ್ಣವಾಗಿ ಆಚರಿಸಿದ್ದನ್ನು ಹಾಗೂ ಸತ್ಯಸಂಧತೆಯನ್ನು ಒತ್ತಿ ಹೇಳಿದ್ದನ್ನು ನಾವು ನೋಡಬಹುದು.

**೨) ಪ್ರಾಮಾಣಿಕತೆ :** ಇತರರರೊಂದಿಗೆ ನಾವು ಹೇಗೆ ಸತ್ಯಸಂಧರಾಗಿರುವೆವೋ, ಅದೇ ರೀತಿ ನಮ್ಮೊಂದಿಗೂ ಸತ್ಯವನ್ನು ಪಾಲಿಸಬೇಕು. 'ಒಳಗೊಂದು ಹೊರಗೊಂದು' ಎಂಬಂತೆ ಇರಬಾರದು. 'ಕಾಯೇನ ವಾಚಾ ಮನಸಾ' - ಎಂದರೆ ಮಾತಿನಲ್ಲೂ ಯೋಚನೆಯಲ್ಲೂ, ಕಾರ್ಯದಲ್ಲೂ ಒಂದೇ ಆಗಿರಬೇಕು. ಆಲೋಚನೆ, ಮಾತು ಮತ್ತು ನಡತೆ ಇವು ಮೂರೂ ಒಂದಾಗಿರುವುದು ಸಾಧಕನು ಪಾಲಿಸಬೇಕಾದ ಮಹತ್ವದ ಗುಣ. ಇದರಲ್ಲಿ ಚ್ಯುತನಾದವನು ಪ್ರಾಮಾಣಿಕನಾಗಿರಲಾರನು. ಭಗವಂತನ ಅಸ್ತಿತ್ವದಲ್ಲಿ ನಂಬಿಕೆ ಇರುವವನು ನೂರಕ್ಕೆ ನೂರರಷ್ಟು ಅದಕ್ಕನುಗುಣವಾಗಿ ನಡೆದುಕೊಳ್ಳಬೇಕು; ದೇವರಿಗೆ ಒಪ್ಪುವ ರೀತಿ ಬದುಕಬೇಕು. ತಪ್ಪಿದರೆ ಅದು ಸಾಧಕನ ಜೀವನವಾಗಲಾರದು.

**೩) ವಿವೇಕ :** ಸಾಧಕನಿಗೆ ಈ ಪ್ರಪಂಚ ಅನಿತ್ಯವೆಂದೂ ಪಾರಮಾರ್ಥಿಕ ಸತ್ಯವೇ ನಿತ್ಯವೆಂದೂ ಬೌದ್ಧಿಕವಾಗಿ ತಿಳಿದಿದ್ದರೆ ಸಾಲದು; ಅದನ್ನು ಸದಾ ಮನಸ್ಸಿನಲ್ಲಿ ಹಿಡಿದಿಟ್ಟುಕೊಳ್ಳಬೇಕು. ಆಗ ಅವನಿಗೆ ಮನಸ್ಸನ್ನು ಆಧ್ಯಾತ್ಮಿಕ ಸಾಧನೆಗೆ ಅಗತ್ಯವಾದ ಉನ್ನತ ಸ್ಥಿತಿಯಲ್ಲಿ ಇಟ್ಟುಕೊಳ್ಳುವುದು ಸಾಧ್ಯವಾಗುತ್ತದೆ. ಹೀಗೆ ವಿಚಾರದ ಮೂಲಕ ಮಾಡುವ ಅಭ್ಯಾಸವನ್ನೇ 'ವಿವೇಕ' ಎನ್ನುತ್ತಾರೆ. ವೇದಾಂತ ಹಾಗೂ ಯೋಗಶಾಸ್ತ್ರ ಈ ಮಾರ್ಗಕ್ಕೆ ಪ್ರಾಮುಖ್ಯತೆ ನೀಡಿವೆ.

**೪) ಪರಿಶುದ್ಧತೆ :** ಸಾಧಕನು ದೈಹಿಕ ಹಾಗೂ ಮಾನಸಿಕ ಪರಿಶುದ್ಧತೆಯನ್ನು ಹೊಂದಿರುವುದು ಅತ್ಯಂತ ಅಗತ್ಯ. ಬಾಹ್ಯದಲ್ಲಿ ಆಧ್ಯಾತ್ಮಿಕ ಸಾಧನೆ-ಆಚರಣೆಗಳನ್ನು ಮಾಡುತ್ತ, ಮನಸ್ಸಿನಲ್ಲಿ ವಿಷಯಸುಖ, ದೈಹಿಕ ಸುಖಗಳಿಗಾಗಿ ಹಾತೊರೆಯುವವನನ್ನು ಗೀತೆ 'ಮಿಥ್ಯಾಚಾರಿ' ಎಂದು ಕರೆಯುತ್ತದೆ *(ಗೀತೆ, ೩.೬)*. ದೇವರನ್ನೇ ಚಿಂತಿಸುತ್ತ, ಎಲ್ಲ ಕಾರ್ಯಗಳನ್ನು ಭಗವಂತನಿಗಾಗಿ ಮಾಡುತ್ತ ಇರುವವನು ಪರಿಶುದ್ಧನಾಗುತ್ತ ಹೋಗುತ್ತಾನೆ. ಕಾರಣ, ಭಗವಂತನು ಎಲ್ಲ ಪರಿಶುದ್ಧತೆಗಳ ಉಗಮ ಸ್ಥಾನವಾಗಿರುವನು. 'ಶುದ್ಧ ಮನಸ್ಸು, ಶುದ್ಧ ಬುದ್ಧಿ ಹಾಗೂ ಶುದ್ಧ ಆತ್ಮ ಒಂದೇ' ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಭಗವಂತನನ್ನು ಬಿಟ್ಟು ಉಳಿದದ್ದನ್ನು ಅಥವಾ ಅನಾತ್ಮವನ್ನು ಚಿಂತಿಸಿದಷ್ಟೂ ಸಾಧಕನು ಅಶುದ್ಧನಾಗುವನು; ಅದರಲ್ಲೇ ಪ್ರವೃತ್ತನಾಗುವನು. ಆದ್ದರಿಂದ ಪರಿಶುದ್ಧತೆ ಅತ್ಯಂತ ಅಗತ್ಯ.

**೫) ಶ್ರದ್ಧೆ :** ತಾನು ಸತ್ಯವೆಂದು ನಂಬಿರುವ ಭಗವಂತನಲ್ಲಿ, ಗುರುವಿನ ಮೇಲೆ, ಪವಿತ್ರವಾದ ಗ್ರಂಥಗಳಲ್ಲಿ ಹಾಗೂ ಸಂತ-ಮಹಾತ್ಮರಲ್ಲಿ ಅಪರಿಮಿತ ಭಕ್ತಿ-ಗೌರವಗಳನ್ನು ಹೊಂದಿರುವುದೇ ಶ್ರದ್ಧೆ. ಶ್ರದ್ಧೆಯೆಂದರೆ 'ಆಸ್ತಿಕ್ಯ ಬುದ್ಧಿ'— ಅಥವಾ ಭಗವಂತನಲ್ಲಿ ಸಂಪೂರ್ಣ ನಂಬಿಕೆಯೆಂದೂ, ಗುರು ಹಾಗೂ ಶಾಸ್ತ್ರಗಳಲ್ಲಿ ನಂಬಿಕೆಯೆಂದೂ ಹೇಳಲಾಗಿದೆ. 'ಶ್ರದ್ಧೆ' ಎಂಬ ಪದವನ್ನು ಅದೇನೆಂದು ವಿವರಿಸಲಾಗದು; ಆದರೆ ಅದನ್ನು ನಮ್ಮ ಸಂಸ್ಕೃತಿ ಅಳವಡಿಸಿಕೊಂಡಿದೆ, ಅದನ್ನು ನಮ್ಮ ಜೀವನದ ಉಸಿರಾಗಿಸಿದ್ದೇವೆ ಎಂದು ಸ್ವಾಮೀಜಿ ಹೇಳುತ್ತಾರೆ. ಶ್ರದ್ಧೆಯಿದ್ದವನು ಭಗವಂತನನ್ನು ಪಡೆಯಲು ಹೆಚ್ಚು ತಡವಿಲ್ಲ ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ.

**೬) ತ್ಯಾಗ, ವೈರಾಗ್ಯ :** ತ್ಯಾಗವಿಲ್ಲದೆ ಯಾವುದೇ ಆಧ್ಯಾತ್ಮಿಕ ಉನ್ನತಿಯಾಗದು ಎಂಬುದೇ ಎಲ್ಲ ಸಾಧು-ಸಂತರ ಉಪದೇಶಗಳ ಪಲ್ಲವಿ. ಈ ಭೌತಿಕ ಪ್ರಪಂಚವನ್ನು ಮೀರಿದ, ಉನ್ನತವಾದ, ಸೂಕ್ಷ್ಮವಾದ, ಆಂತರಿಕ ಜಗತ್ತೇ ಆಧ್ಯಾತ್ಮಿಕ ಜಗತ್ತು. ಅದು ಸತ್ಯವೆಂದೂ, ಪ್ರತಿಕ್ಷಣವೂ ಬದಲಾಗುವ ಈ ಪ್ರಪಂಚ ಕ್ಷಣಿಕ ಹಾಗೂ 'ಮಿಥ್ಯೆ'ಯೆಂದೂ ಅರಿತವನು ಅನಿತ್ಯವಾದ ಈ ಲೋಕ ಹಾಗೂ ಹಾಗೂ ಸ್ವರ್ಗಾದಿ ಲೋಕಗಳನ್ನು ತ್ಯಜಿಸಿ, ತನ್ನನ್ನು ಸಂಪೂರ್ಣ ಭಗವಂತನಿಗಾಗಿ ಸಮರ್ಪಿಸಿಕೊಳ್ಳುತ್ತಾನೆ. ಇದೇ ತ್ಯಾಗ. ಭೌತಿಕವಾಗಿಯೂ ಆಂತರಿಕವಾಗಿಯೂ ತ್ಯಾಗ ಮಾಡಿದವನು ಸಂನ್ಯಾಸಿಯಾಗುತ್ತಾನೆ; ಭೌತಿಕವಾಗಿ ಪ್ರಪಂಚವನ್ನು (ಅಂದರೆ ಪ್ರಾಪಂಚಿಕ ಬದುಕು) ತ್ಯಜಿಸಲಾಗದವನು ವಿವೇಕ-ವೈರಾಗ್ಯಾದಿ ಗುಣಗಳನ್ನು ಗಳಿಸುತ್ತ ಆಂತರಿಕ ತ್ಯಾಗ ಮಾಡುತ್ತಾನೆ, ಅವನು ಗೃಹಸ್ಥನಾಗುತ್ತಾನೆ. ಹೀಗೆ ಈ ಎರಡೂ ಮಾರ್ಗಗಳಲ್ಲಿ ತ್ಯಾಗ ಅತ್ಯಗತ್ಯ.

**೭) ನಿಗ್ರಹ:** ಬಾಹ್ಯ ಇಂದ್ರಿಯಗಳು ಹಾಗೂ ಆಂತರಿಕ ಇಂದ್ರಿಯಗಳು ಸುಖವನ್ನರಸಿ ವಿಷಯ ವಸ್ತುಗಳೆಡೆಗೆ ಸಾಗುವುದು ನೈಸರ್ಗಿಕ ನಿಯಮ. ಅವುಗಳ ಹಿಂದೆ ಸಾಗುವವನು ಪ್ರಾಪಂಚಿಕ ಜಗತ್ತನ್ನು ಬಿಟ್ಟುಬಿಡಲಾರನು. ಆದ್ದರಿಂದ ನಮ್ಮ ಆಂತರಿಕ, ಬಾಹ್ಯ ಇಂದ್ರಿಯಗಳನ್ನು ನಿಗ್ರಹಿಸಿ ಮನಸ್ಸು-ಬುದ್ಧಿಗಳನ್ನು ನಮ್ಮ ಅಂತರಂಗದಲ್ಲಿರುವ ಭಗವಂತನೆಡೆಗೆ ಹರಿಸಬೇಕು. ಎಲ್ಲ ಧರ್ಮಗಳಲ್ಲೂ, ಆಧ್ಯಾತ್ಮಿಕ ಪರಂಪರೆಗಳಲ್ಲೂ, ಶಾಸ್ತ್ರಗ್ರಂಥಗಳಲ್ಲೂ ನಿಗ್ರಹಕ್ಕೆ ಅತಿ ಹೆಚ್ಚಿನ ಪ್ರಾಶಸ್ತ್ಯವಿದೆ.

**೮) ಅಭ್ಯಾಸ :** ದೇಹ, ಇಂದ್ರಿಯ ಮನಸ್ಸುಗಳ ಹತೋಟಿ ಸುಲಭವಲ್ಲವೆಂದೂ, ವೈರಾಗ್ಯದೊಂದಿಗೆ ನಿಯಮಿತವಾದ ಅಭ್ಯಾಸ ಅದಕ್ಕೆ ಅಗತ್ಯವೆಂದೂ ಗೀತೆ ಹೇಳುತ್ತದೆ. ಯೋಗಸೂತ್ರ ಕೂಡ, 'ಅಭ್ಯಾಸ-ವೈರಾಗ್ಯಗಳಿಂದ ಮನಸ್ಸಿನ ವೃತ್ತಿಗಳನ್ನು ನಿರೋಧಿಸಬೇಕು' *(ಪಾತಂಜಲ ಯೋಗಸೂತ್ರಗಳು, ೧-೧೨)* ಎಂದು ಹೇಳಿದೆ. ಪ್ರತಿನಿತ್ಯವೂ ನಿಯಮಿತವಾದ ಸಮಯದಲ್ಲಿ ಜಪ, ತಪ, ಧ್ಯಾನ, ಪೂಜೆ, ಪ್ರಾರ್ಥನೆಗಳೇ ಮೊದಲಾದ ಆಧ್ಯಾತ್ಮಿಕ ಸಾಧನೆಗಳನ್ನು ಮಾಡಬೇಕೆಂದು ಎಲ್ಲ ಮಹಾನ್ ಗುರುಗಳೂ ಬೋಧಿಸುತ್ತಾರೆ. ನಿಯತವಾದ ಅಭ್ಯಾಸದಿಂದ ಒದಗಿಬರುವ ನಿಷ್ಠೆ, ಸಂಸ್ಕಾರಗಳು ಸಾಧಕನ ವ್ಯಕ್ತಿತ್ವವನ್ನು ಸಾಕ್ಷಾತ್ಕಾರದತ್ತ ವೇಗವಾಗಿ ಕರೆದೊಯ್ಯುವುದು.

**೯) ಸಹಾನುಭೂತಿ :** ಎಲ್ಲ ಜೀವಿಗಳ ಮೇಲೆ ಕರುಣೆ, ಅನುಕಂಪ, ದಯೆ, ಮೈತ್ರಿ, ಆತ್ಮೀಯತೆ ಮುಂತಾದ ಭಾವನೆಗಳನ್ನು ಬೆಳೆಸಿಕೊಳ್ಳುವುದು ಅತ್ಯಗತ್ಯ. ಸಾಧಕನು ಕೇವಲ ತನ್ನ ಸಾಕ್ಷಾತ್ಕಾರಕ್ಕಾಗಿ ಮಾತ್ರ ಚಿಂತಿಸಿದರೆ ಅವನು ಸ್ವಾರ್ಥಿಯಾಗುತ್ತಾನೆ. ಎಲ್ಲ ಜೀವಿಗಳಲ್ಲೂ ಭಗವಂತನೇ ನೆಲೆಸಿದ್ದಾನೆ ಎಂಬ ಸತ್ಯವನ್ನು ವೇದೋಪನಿಷತ್ತುಗಳೂ, ಗೀತೆಯೂ, ಶ್ರೀರಾಮಕೃಷ್ಣರೇ ಮೊದಲಾದ ಅವತಾರ ಪುರುಷರೂ ಜಗತ್ತಿಗೆ ಸಾರಿದ್ದಾರೆ. ಆದ್ದರಿಂದ ಎಲ್ಲ ಜೀವಿಗಳಲ್ಲೂ ಭಗವಂತನನ್ನೇ ಕಾಣಬೇಕು; ಅಂಥ ಭಗವಂತನಿಗೆ ನಮ್ಮ ದಯೆ-ಕರುಣೆ ಬೇಕಿಲ್ಲ, ಆದರೆ ಅವನಿಗೆ ಸೇವೆ ಮಾಡುವ ಮೂಲಕ ನಾವು ನಮ್ಮ ಆಧ್ಯಾತ್ಮಿಕ ಉನ್ನತಿಯನ್ನು ಮಾಡಿಕೊಳ್ಳಬಹುದು. ಬುದ್ಧಿಗಿಂತ ಹೃದಯ ಮುಖ; ಇದೇ ಎಲ್ಲ ಬಗೆಯ ಸೇವಾಕಾರ್ಯಗಳಿಗೆ, 'ಕರ್ಮಯೋಗ'ಕ್ಕೆ ಹಿನ್ನೆಲೆ.

ಇವು ಕೆಲವು ಪ್ರಮುಖ ಆಧ್ಯಾತ್ಮಿಕ ಗುಣಗಳು. ಈ ಹಿಂದೆ ಹೇಳಿದ, ಶಾಸ್ತ್ರಗಳಲ್ಲಿ ಹಾಗೂ ಸಾಧುಸಂತರ ಉಪದೇಶಗಳಲ್ಲಿ ಹೇಳಲಾದ ಹಲವು ಗುಣಗಳೂ ಕೂಡ ಸಾಧಕನಿಗೆ ಮುಖ್ಯ. ✷

### ಸೆಪ್ಟೆಂಬರ್ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೨ | ಸೋಮವಾರ | ಗಣೇಶ ಚತುರ್ಥಿ |
| ೯ | ಸೋವಾರ | ಏಕಾದಶಿ |
| ೨೩ | ಸೋಮವಾರ | ಸ್ವಾಮಿ ಅಭೇದಾನಂದ ಜಯಂತಿ |
| ೨೫ | ಬುಧವಾರ | ಏಕಾದಶಿ |
| ೨೮ | ಶನಿವಾರ | ಸ್ವಾಮಿ ಅಖಂಡಾನಂದ ಜಯಂತಿ |